# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ದೋಣಿಗಳಲ್ಲಿ ದ್ವಿಮುಖ ಸಂಪರ್ಕ ಸಾಧನಗಳನ್ನು ಅಳವಡಿಸುವ ಕುರಿತು.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/04/ಎಂಇಎಫ್/2019 ದಿನಾಂಕ: 17-03-2020 ಮತ್ತು 11-08-2020.

******

## ಪ್ರಸ್ತಾವನೆ:

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಕರ್ನಾಟಕ ರಾಜ್ಯವು ಮೂರು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ರಾಜ್ಯವು 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶವನ್ನು ಮತ್ತು 27,000 ಚದರ ಕಿ.ಮೀ. ಖಂಡಾವರಣ ಪ್ರದೇಶವನ್ನೂ (Continental Shelf) ಹೊಂದಿದೆ. ರಾಜ್ಯವು ವಾರ್ಷಿಕ 4.25 ಲಕ್ಷ ಮೆಟ್ರಿಕ್ ಟನ್ನುಗಳ ಕಡಲ ಮೀನು ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ. ಮೀನುಗಾರಿಕೆಯು ಕರಾವಳಿ ಕರ್ನಾಟಕದ ಪ್ರಾಚೀನ ಕಸುಬಾಗಿದ್ದು, ಕಾಲಕ್ರಮೇಣ ಸಾಂಪ್ರದಾಯಿಕ ಜೀವನಾಧಾರದಿಂದ ಬಹುಕೋಟಿ ಉದ್ದಿಮೆಯಾಗಿ ಬೆಳೆದು ನಿಂತಿದೆ.

ಕರಾವಳಿ ಮೀನುಗಾರಿಕೆ ವಲಯದ ಅಭಿವೃದ್ಧಿಯನ್ನು, ಸಾಂಪ್ರದಾಯಿಕ ಮೀನುಗಾರಿಕೆ ವಲಯದ ಸಬಲೀಕರಣ, ಸಮುದ್ರದಲ್ಲಿನ ಮೀನುಗಾರಿಕೆ ದೋಣಿಗಳ ಸುರಕ್ಷತೆಯನ್ನು ವೃದ್ಧಿಸುವ, ಆಳಸಮುದ್ರ ಸಂಪನ್ಮೂಲಗಳನ್ನು ಸಮರ್ಪಕವಾಗಿ ವಿನಿಯೋಗಿಸುವುದರೊಂದಿಗೆ ಮೀನುಗಾರಿಕೆಯಲ್ಲಿ ಸುಸ್ಥಿರತೆಯನ್ನು ಕಾಪಾಡುವ ಹಾಗೂ ಈ ಮೂಲಕ ಉದ್ಯೋಗ ಸೃಷ್ಟಿಸುವ, ಮೀನುಗಾರರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ, ಆಹಾರ ಭದ್ರತೆಯನ್ನು ಹೆಚ್ಚಿಸುವ ಹಾಗೂ ಸಾಗರ ಉತ್ಪನ್ನಗಳ ರಫ್ತನ್ನು ವೃದ್ಧಿಸುವ ಧ್ಯೇಯದೊಂದಿಗೆ ಕೈಗೊಳ್ಳಲಾಗಿದೆ.

ಆಧುನಿಕ ಮೀನುಗಾರಿಕೆ ವಿಧಾನವು ರಾಜ್ಯದಲ್ಲಿ ಮೀನುಗಾರಿಕೆ ದೋಣಿಗಳ ಯಾಂತ್ರೀಕರಣದಿಂದ ಪ್ರಾರಂಭವಾಗಿದೆ. ಹೆಚ್ಚಿನ ಮೀನು ಉತ್ಪಾದನೆಯು ಯಾಂತ್ರೀಕೃತ ದೋಣಿಗಳಿಂದ ಬಂದಿರುತ್ತದೆ. ಕಡಲ ಮೀನುಗಾರಿಕೆಯ ಕಾರ್ಯಾಚರಣೆಯಲ್ಲಿ 4572 ಯಾಂತ್ರೀಕೃತ ದೋಣಿಗಳು, 9251 ಮೋಟರೀಕೃತ ದೋಣಿಗಳು ಮತ್ತು 9070 ನಾಡದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯಲಾಗುತ್ತಿದೆ. 2018-19ನೇ ಸಾಲಿನಲ್ಲಿ 3.89 ಲಕ್ಷ ಟನ್ ಕಡಲ ಮೀನು ಉತ್ಪಾದನೆಯಾಗಿದೆ.

ಮೀನುಗಾರಿಕೆ ದೋಣಿಗಳು ತೀವ್ರತರವಾದ ಗಾಳಿ ಹಾಗೂ ಅಲೆಗಳಿಂದ ಕೂಡಿದ ಆಳಸಮುದ್ರದಲ್ಲಿ ಮೀನುಗಾರಿಕೆಯನ್ನು ಕೈಗೊಳ್ಳುವುದರಿಂದ ಮೀನುಗಾರಿಕೆ ವೃತ್ತಿಯು ಕಷ್ಟದಾಯಕ ಮತ್ತು ಅಪಾಯಕಾರಿ ವೃತ್ತಿಯಾಗಿರುತ್ತದೆ. ಈ ರೀತಿ ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಸಮುದ್ರದಲ್ಲಾಗುವ ವಾತಾವರಣದ ವೈಪರೀತ್ಯಗಳಿಂದ ಹಲವು ಬಾರಿ ಮೀನುಗಾರಿಕೆ ದೋಣಿಗಳು ಅಪಘಾತಕ್ಕೀಡಾಗಿ ಮೀನುಗಾರರು ಸಾವನ್ನಪ್ಪುವುದಲ್ಲದೇ, ಅಪಾರ ಆಸ್ತಿ ಸಹ ನಷ್ಟವಾಗುತ್ತದೆ. ಇದಲ್ಲದೇ ಮುನ್ಸೂಚಿತ ಹವಾಮಾನ ವರದಿಗಳ ಮಾಹಿತಿ ವಿನಿಮಯದಲ್ಲಿ ಆಗುತ್ತಿರುವ ವಿಳಂಬದಿಂದ ಹಾಗೂ ತುರ್ತು ಸಂದರ್ಭಗಳಲ್ಲಿ ನೆರವು ದೊರಕದೇ ಮೀನುಗಾರಿಕೆಯಲ್ಲಿ ತೊಡಗಿರುವಾಗ ಆಗುವ ಅವಘಡಗಳಿಂದ ಮೀನುಗಾರರು ಸಾವನ್ನಪ್ಪಲು ಕಾರಣವಾಗಿರುತ್ತವೆ.

ಈ ರೀತಿ ಆಳಸಮುದ್ರದಲ್ಲಿ ಮೀನುಗಾರಿಕೆ ಮಾಡುವ ಸಂದರ್ಭದಲ್ಲಿ ಘಟಿಸುವ ಅವಘಡಗಳ ಮಾಹಿತಿಯು ಸಂರಕ್ಷಣಾ ಪಡೆಗೆ ತಕ್ಷಣ ದೊರಕದಿರುವ ಕಾರಣದಿಂದ ಕರಾವಳಿ ಕಾವಲು ಪಡೆಯು ಸೂಕ್ತ ಸಮಯದಲ್ಲಿ ಅವಘಡ ಸಂಭವಿಸಿದ ಸ್ಥಳ ತಲುಪಲು ವಿಳಂಬವಾಗುವ ಸಾಧ್ಯತೆಗಳು ಹೆಚ್ಚಿರುತ್ತದೆ. ಇದರಿಂದ ಮೀನುಗಾರರ ಜೀವ ಹಾನಿಯಾಗುವ ಸಂಭವವಿರುತ್ತದೆ.

ಈ ಹಿನ್ನೆಲೆಯಲ್ಲಿ, ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ, ಮೀನುಗಾರರ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿರುವ ಸಂದರ್ಭಗಳಲ್ಲಿ ಸಂರಕ್ಷಣಾ ಪಡೆಗೆ ತಕ್ಷಣ ಮಾಹಿತಿ ರವಾನಿಸಲು ಹಾಗೂ ಅಪಾಯದಲ್ಲಿರುವ ಮೀನುಗಾರರಿಗೆ ಸಂರಕ್ಷಣಾ ಪಡೆಯು ಮಾಹಿತಿ ರವಾನಿಸಲು ಮೀನುಗಾರಿಕೆ ದೋಣಿಗಳಲ್ಲಿ ಒಂದು ಉತ್ತಮವಾದ ದ್ವಿಮುಖ ಸಂವಹನ (Two way Communication) ಸಾಧನವನ್ನು ಅಳವಡಿಸುವುದು ಅತ್ಯಂತ ಅವಶ್ಯಕರವಾಗಿರುತ್ತದೆ. ಈ ರೀತಿಯ ದ್ವಿಮುಖ ಸಂವಹನ ಸಂಪರ್ಕ ಸಾಧನದಿಂದ ತುರ್ತು ಪರಿಸ್ಥಿತಿಯಲ್ಲಿ ಮೀನುಗಾರರು ಈ ಉಪಕರಣ ಉಪಯೋಗಿಸಿ ಕರಾವಳಿ ಕಾವಲು ಪಡೆಗೆ ಸಂದೇಶ ಕಳುಹಿಸಿ ಅವರ ನೆರವನ್ನು ಸಕಾಲದಲ್ಲಿ ಪಡೆಯಬಹುದು ಹಾಗೂ ಮೀನುಗಾರರಿಗೆ Potential Fishing Zone ಮತ್ತು ಹವಾಮಾನ ವೈಪರೀತ್ಯದ ಕುರಿತು ಮುಂಚಿತವಾಗಿಯೇ ಎಚ್ಚರಿಕೆ ಸಂದೇಶಗಳನ್ನು ಸಹ ಮೀನುಗಾರರಿಗೆ ರವಾನಿಸಬಹುದಾಗಿರುತ್ತದೆ. ಹಾಗೆಯೇ, ಕರಾವಳಿ ಕಾವಲು ಪಡೆಯ ಅಧಿಕಾರಿಗಳು ರಾಷ್ಟ್ರೀಯ ಭದ್ರತೆಯ ಹಿತದೃಷ್ಟಿಯಿಂದ ಮೀನುಗಾರರ ದೋಣಿಗಳನ್ನು ಟ್ರ್ಯಾಕ್ ಮಾಡುವ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ, ಕೇಂದ್ರ ಸರ್ಕಾರದ ಪತ್ರ ಸಂ:30035/15/2016 Fy(T-1) Vol-II, ದಿನಾಂಕ: 23/09/2020 ರಲ್ಲಿ ದಿನಾಂಕ: 18/08/2020 ರಂದು ನಡೆದ High level meeting to discuss the recommendations of the Expert Committee for "Examination of veracity of various tracking/communication devices available and developed being used by different category of marine fishing vessels" ನಡವಳಿಯಲ್ಲಿ ಸಹ ಮೀನುಗಾರಿಕೆ ದೋಣಿಗಳಿಗೆ ದ್ವಿಮುಖ ಸಂವಹನ ಸಾಧನಗಳನ್ನು ಅಳವಡಿಸಬೇಕಾಗಿ ತಿಳಿಸಿರುತ್ತಾರೆ.

ಆದುದರಿಂದ, ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ ಆಗಬಹುದಾದ ಸಂಕಷ್ಟದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು, ಆಗಬಹುದಾದ ಅನಾಹುತವನ್ನು ತಡೆಯುವ ನಿಟ್ಟಿನಲ್ಲಿ ಮತ್ತು ಮೀನುಗಾರರ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ನಡೆಸುತ್ತಿರುವ ಎಲ್ಲಾ ಯಾಂತ್ರಿಕೃತ ಮತ್ತು ಮೋಟಾರೀಕೃತ ದೋಣಿಗಳಲ್ಲಿ ದ್ವಿಮುಖ ಸಂವಹನ (Two way Communication) ಸಾಧನವನ್ನು ದೋಣಿ ಮಾಲೀಕರುಗಳು ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ಅಳವಡಿಸುವ ಕುರಿತು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಮೀನುಗಾರರ ಸುರಕ್ಷತೆ ಹಾಗೂ ರಾಷ್ಟ್ರೀಯ ಭದ್ರತೆಯ ಹಿತದೃಷ್ಟಿಯಿಂದ ಎಲ್ಲ ಯಾಂತ್ರೀಕೃತ ಮತ್ತು ಮೋಟಾರೀಕೃತ ಮೀನುಗಾರಿಕೆ ದೋಣಿಗಳಲ್ಲಿ ದ್ವಿಮುಖ ಸಂವಹನ ಸಾಧನವನ್ನು ಅಳವಡಿಸುವುದು ಅತ್ಯಗತ್ಯವೆಂಬುದನ್ನು ಸರ್ಕಾರವು ಮನಗಂಡು ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-115 ಮೀಇಯೋ 2020, ಬೆಂಗಳೂರು ದಿನಾಂಕ: 07-10-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕಡಲ ಮೀನುಗಾರಿಕೆ ಕಾಯ್ದೆಯ ಸೆಕ್ಷನ್ (3)ರ ಸಬ್ ಸೆಕ್ಷನ್ 1(ಬಿ) ಹಾಗೂ ಸಬ್ ಸೆಕ್ಷನ್ 2(ಸಿ) ಮತ್ತು(ಡಿ) ರಲ್ಲಿ ನೀಡಿರುವ ಅಧಿಕಾರದನ್ವಯ ಮೀನುಗಾರರ ಸುರಕ್ಷತೆ ಹಾಗೂ

ರಾಷ್ಟ್ರೀಯ ಭದ್ರತೆಯ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ನಡೆಸುತ್ತಿರುವ ಎಲ್ಲಾ ಯಾಂತ್ರೀಕೃತ ಮತ್ತು ಮೋಟಾರೀಕೃತ ಮೀನುಗಾರಿಕೆ ದೋಣಿಗಳಲ್ಲಿ ದೋಣಿ ಮಾಲೀಕರು ಕಡ್ಡಾಯವಾಗಿ ದ್ವಿಮುಖ ಸಂವಹನ (Two way Communication) ಸಾಧನವನ್ನು ಅಳವಡಿಸಲು ಆದೇಶಿಸಿದೆ.

1. ಎಲ್ಲಾ ಯಾಂತ್ರೀಕೃತ ಮತ್ತು ಮೋಟಾರೀಕೃತ ಮೀನುಗಾರಿಕೆ ದೋಣಿಗಳಲ್ಲಿ ದ್ವಿಮುಖ ಸಂವಹನ ಸಾಧನವನ್ನು ದೋಣಿ ಮಾಲೀಕರು ಸ್ವಂತ ಖರ್ಚಿನಲ್ಲಿ ಕಡ್ಡಾಯವಾಗಿ ದಿನಾಂಕ: 31-12-2020 ರೊಳಗಾಗಿ ಅಳವಡಿಸತಕ್ಕದ್ದು.

2. ಮೀನುಗಾರಿಕಾ ನಿರ್ದೇಶಕರು ಈ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಆಗಿಂದಾಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

07/10/2020
(ಶಕುಂತಲಾ ಚೌಗಲಾ)
ಸರ್ಕಾರದ ಉಪ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

7.10.2020

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಇಲಾಖೆ, ಬೆಂಗಳೂರು.
4) ಮೀನುಗಾರಿಕೆ ಜಂಟಿ ನಿರ್ದೇಶಕರು, ಮೀನುಗಾರಿಕೆ ಬಂದರುಗಳು, ಮಲ್ಪೆ.
5) ಸಂಬಂಧಪಟ್ಟ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಮಾನ್ಯ ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿ / ಉಪ ಕಾರ್ಯದರ್ಶಿ ಇವರು ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ.
9) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.